ಶ್ರೀ ಎನ್ ಹುಚ್ಚಮಾಸ್ತಿಗೌಡ,—ತಾ॥30-7-1975ರಲ್ಲಿ ಒಂದು ಸುತ್ತೋಲೆಯನ್ನು ಕಳುಹಿಸಿ, ಖಾಸಗೀ ಜಮೀನುಗಳಲ್ಲಿ ಮುರಗಳಿದ್ದರೂ ಸಹ ಅವುಗಳನ್ನು ಕಡಿಯುವುದನ್ನು ನಿಲ್ಲಿಸಲು ಬೇಕೆಂದು ಅದರಲ್ಲಿ ತಿಳಿಸಿದೆ.

Visit of Ministers to Constituencies

432. SRI H. T. KRISHNAPPA (Nagamangala).—Will the chief Minister be pleased to state:—

(*a*) whow many times the Ministers of the State of Karnataka have visited their respective constituencies after they assumed office as Ministers.

(*b*) how many times they visited other constituencies in their respective districts?

SRI H. M. CHANNABASAPPA.—(Minister for Public Works)—[on behalf of SRI D. DEVARAJ URS (Chief Minister)].—

(*a*) and (*b*) Statement appended.

STATEMENT

Showing visits of Ministers of the State of Karnataka to their respective constituencies and other constituencies in their respective districts.

Sl. No.	Name of Minister	How many times visited Home Constituency from date of assumption of office upto 15-1-1976.	How many times visited other constituencies in the respective Districts from date of assumption of office upto 15-1-1976
1	2	3	4
1.	Shri D. Devaraj Urs, Chief Minister	7	52
2.	Shri H. M. Channabasappa, Minister for Public Works.	31	29
3.	Shri H. Siddaveerappa, Minister for Health.	21	96

1	2	3	4
4.	Shri Mohammed Ali Meh ab Ali, Minister for Transport and Tourism.	9	7
5.	Shri M. Mallikarjuna Swamy, Minister. for Education.	22	54
6.	Shri N. Huchhamasti Gowda, Minister for Revenue.	45	95
7.	Shri M. Y. Ghorpade, Minister for Finance and Housing.	26	39
8.	Shri S. M. Krishna, Minister for Industries and Parliamentary Affairs	37	153
9.	Shri Naikar Dyamappa Kallappa Minister for Law and Municipal Administration	34	25
10.	Shri K. H Ranganath, Minister for Co-operation.	18	21
11.	Shri N. Chikke Gowda, Minister for Agriculture and Animal Husbandary	70	69
12.	Shri N. Rachaiah, Minister fo (Elected from L.A. Constituency - Rural Development and Social welfare		
13.	Shri Siddika Mohammed Yahya, Minister for Excise and Labour.	23	66
14.	Shri C. N. Patil, Minister for Forests.	22	43
15.	Smt. E. E. Vaz, Minister for Food and Civil Supply	46	49
16.	Shri K. T. Rathod, Minister of State for Fisheries and Horticulture.	45	156
17.	Shri Nagangal Sangappa Balappa, Minister of State for Minor Irrigation.	42	75
18.	Shri Koujalagi Veeranna Shivalingappa, Minister of State for Sericulture.	19	119

1	2	3	4
19	Shri Devendrappa Ghalappa, Minister of State for Animal Husbandry.	31	65
20.	Shri Kittur Raghunath Dhulappa, Minister of State for Regulated Market.	15	124
21.	Shri R. Gundu Rao, Minister of State for Information and Youth Service	15	6
22.	Shri K. Sriramulu, Minister of State for Labour.	20	—
23.	Shri M. Veerappa Moily, Minister of State for Small Scale Industries.	13	16
24.	Shri Subhash Asture, Minister of State for Major and Medium Irrigation.	18	35
25.	Smt. Manorama Madhwaraj, Minister of State for Women and Children's Welfare.	14	33
26.	Shi H. C. Srikantaiah, Minister of State for Power.	33	30
27.	Shri Subbayya Shetty, Minister of State for Land Reforms.	9	45

ಶ್ರೀ ಎಚ್. ಟಿ. ಕೃಷ್ಣಪ್ಪ.—ಇಲ್ಲಿ ನನ್ನ ಪ್ರಶ್ನೆಗಳಿಗೆ ಕೊಟ್ಟಿರುವ ವಿವರಗಳನ್ನು ನೋಡಿದ್ದೆ ಆದರೆ, ಹಲವಾರು ಜನ ಮಂತ್ರಿಗಳು ತಮ್ಮ ಜಿಲ್ಲೆಗಿಂತ ಹೆಚ್ಚಾಗಿ ತಮ್ಮ ಚುನಾವಣಾ ಕ್ಷೇತ್ರಗಳಿಗೆ ಹೆಚ್ಚಿಗೆ ಹೋಗಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ ಮತ್ತು ಕೆಲವು ಮಂತ್ರಿಗಳು ಕೇವಲ ತಮ್ಮ ಕ್ಷೇತ್ರಾಭಿವೃದ್ಧಿಯ ಬಗ್ಗೆ ಹೆಚ್ಚಾಗಿ ಜಂತನೆ ಮಾಡಿ ಬೇರೆ ಭಾಗಗಳಿಗೆ ಯಾವಗಲೂ ಪ್ರವಾಸ ಹೋಗಿರುವುದು ಈ ವಿವರಗಳಿಂದ ತಿಳಿದುಬರುತ್ತದೆ. ಅಷ್ಟೇ ಅಲ್ಲದೆ, ತಮ್ಮ ವೈಯಕ್ತಿಕವಾದಂಥ ಪ್ರತಿಷ್ಠೆಯನ್ನು ಬೆಳೆಸಿಕೊಳ್ಳುವುದಕ್ಕಾಗಿ ಸರ್ಕಾರದ ಹಣವನ್ನು ವ್ಯಯ ಮಾಡಿ ತಮ್ಮ ಚುನಾವಣಾ ಕ್ಷೇತ್ರಕ್ಕೆ ಅನೇಕ ಸಲ ಭೇಟಿ ಕೊಟ್ಟಿದ್ದಾರೆ. ಈ ರೀತಿ ಭೇಟಿ ಕೊಟ್ಟಿರುವುದನ್ನು ಖಾಸಗೀ ಭೇಟಿ ಎಂದು ಪರಿಗಣಿಸಿ, ಅದಕ್ಕಾಗಿ ಸರ್ಕಾರದಿಂದ ಆಗಿರೆ ತಕ್ಕಂಥ ಖರ್ಚನ್ನು ಅವರಿಂದ ವಸೂಲಿ ಮಾಡುತ್ತೀರಾ ?

† ಶ್ರೀ ಎಚ್. ಎಂ. ಚೆನ್ನಬಸಪ್ಪ.—ಆ ರೀತಿ ವಸೂಲಿ ಮಾಡುವುದು ನ್ಯಾಯವೆಂದು ಕಂಡು ಬರುವುದಿಲ್ಲ ;

ಶ್ರೀ ಎಚ್. ಟಿ. ಕೃಷ್ಣಪ್ಪ.—ಏಕೆ ನ್ಯಾಯವಲ್ಲ ಎಂಬ ಬಗ್ಗೆ ತಾವು ವಿವರಣೆ ಕೊಡಬೇಕು.

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಏಕೆಂದರೆ ಅವರು ಸರ್ಕಾರದ ಕೆಲಸದ ಮೇಲೆ ಹೋಗಿರುತ್ತಾರೆ

ಶ್ರೀ ಎಚ್. ಟಿ. ಕೃಷ್ಣಪ್ಪ —ಈಗ ಒಂದೊಂದು ಜಿಲ್ಲೆಯಲ್ಲಿ ೮, ೯ ಅಥವಾ ಹತ್ತು ತಾಲ್ಲೂಕ್ ಗಳಿರುತ್ತವೆ ಆದರೆ ಕೆಲವು ಜನ ಮಂತ್ರಿಗಳು ಬೇರೆ ತಾಲ್ಲೂಕ್‌ಗಳಿಗೆ ಭೇಟಿ ಕೊಡದೆ ಕೇವಲ ತಮ್ಮ ಚುನಾವಣಾ ಕ್ಷೇತ್ರಕ್ಕೆ ೭೦ ಸಲ; ೬೫ ಸಲ, ಈ ರೀತಿ ಭೇಟಿ ಕೊಟ್ಟಿರುವುದನ್ನು ನೋಡಿದರೆ ಕೇವಲ ತಮ್ಮ ತಾಲ್ಲೂಕಿನ ಹಿತರಕ್ಷಣೆ ಮಾಡುವುದಕ್ಕೆ ಹೊರಟಿದ್ದಾರೆಂಬ ಭಾವನೆ ಬರುತ್ತದೆ. ಆದಕಾರಣ ಯಾವ ಮಂತ್ರಿಗಳು ಕೇವಲ ತಮ್ಮ ಮತ ಕ್ಷೇತ್ರಕ್ಕೆ ಮಾತ್ರ ಭೇಟಿ ಕೊಟ್ಟು ಬೇರೆ ಭಾಗಗಳಿಗೆ ಹೋಗಿಲ್ಲವೋ, ಅಂತಹ ಭೇಟಿಯನ್ನು ಖಾಸಗೀ ಭೇಟಿ ಎಂಬುದಾಗಿ ಪರಿಗಣಿಸಿ, ಅವರಿಂದ ಸರ್ಕಾರಕ್ಕೆ ಆಗಿರತಕ್ಕಂಥ ಖರ್ಚನ್ನು ವಸೂಲಿ ಮಾಡುತ್ತೀರಾ ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ತಮ್ಮ ಅಭಿಪ್ರಾಯದಲ್ಲಿ ಆ ರೀತಿ ಮಾಡುವುದು ಸಾಧುವಾದು ದೆಂದು ಕಂಡುಬರಬಹುದು; ಆದರೆ ಮಂತ್ರಿಗಳು ತಮ್ಮ ಸ್ವಂತ ಕ್ಷೇತ್ರದಲ್ಲಿ ಸರ್ಕಾರದ ಕೆಲಸ ಮಾಡಿದರೆ ಅದು ತಪ್ಪು ಎಂದು ಸರ್ಕಾರದ ಭಾವನೆಯಲ್ಲ ;

ಶ್ರೀ ಸಿ. ಬೈರೇಗೌಡ —ಮಂತ್ರಿಗಳು ತಮ್ಮ ಮತಕ್ಷೇತ್ರಕ್ಕೆ ಹೋದಾಗ ಸರ್ಕಾರದ ಕೆಲಸ ಮಾಡದೆ ತಮ್ಮ ಸ್ವಂತ ಕೆಲಸ ಮಾಡಿಕೊಂಡು ಬಂದಿದ್ದರೆ, ಅಂತಹವರಿಂದ ಸರ್ಕಾರಕ್ಕೆ ಆಗಿರತಕ್ಕಂಥ ಖರ್ಚನ್ನು ವಸೂಲಿ ಮಾಡುತ್ತೀರಾ ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಸರ್ಕಾರದ ಕೆಲಸದ ಮೇಲೆ ಪ್ರವಾಸ ಹೋಗದೆ ತಮ್ಮ ಸ್ವಂತ ಕೆಲಸದ ಮೇಲೆ ಹೋಗಿದ್ದರೆ, ಅದಕ್ಕಾಗಿ ಆಗತಕ್ಕಂಥ ಖರ್ಚುವೆಚ್ಚಗಳನ್ನು ಅವರೇ ವಹಿಸಿ ಕೊಳ್ಳುತ್ತಾರೆ.

ಶ್ರೀ ಕೋಣಂದೂರು ಲಿಂಗಪ್ಪ.—ಇಲ್ಲಿರುವ ಪಟ್ಟಿಯನ್ನು ನೋಡಿದರೆ ಶ್ರೀ ಎಚ್. ಎಂ. ಚೆನ್ನ ಬಸಪ್ಪನವರು ೩೧ ಸಲ ತಮ್ಮ ಸ್ವಂತ ಕ್ಷೇತ್ರಕ್ಕೂ, ೨೯ ಸಲ ಪರಕ್ಷೇತ್ರಕ್ಕೂ ಹೋಗಿದ್ದಾರೆ. ಆದೇರೀತಿ ಶ್ರೀಮಾನ್ ಎನ್. ಚಿಕ್ಕೇಗೌಡರು ೭೦ ಸಲ ತಮ್ಮ ಸ್ವಂತ ಕ್ಷೇತ್ರಕ್ಕೂ ೬೯ ಸಲ ಪರಕ್ಷೇತ್ರಕ್ಕೂ ಹೋಗಿ ದಾರೆ. ಅಂದರೆ ಇವರುಗಳು ಪ್ರವಾಸದಲ್ಲಿಯೂ ಸಮಾನತೆಯನ್ನು ತೋರಿಸತಕ್ಕಂಥ ಸಮಾಜವಾದಿ ಗಳಾಗಿದ್ದಾರೆ. ಆದರೆ ಮಾನ್ಯ ಚೆನ್ನಬಸಪ್ಪನವರು ೩೧ ಸಲ ತಮ್ಮ ಮತ ಕ್ಷೇತ್ರವಾದ ಪಿರಿಯಾಪಟ್ಟಣಕ್ಕೆ ಭೇಟಿ ಕೊಡಬೇಕಾದರೆ, ಅಲ್ಲಿ ಅಂತಹ ಸರ್ಕಾರದ ಕೆಲಸವೇನಿತ್ತು ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಸರ್ಕಾರದ ಕೆಲಸವೇನಿತ್ತು ಎಂಬುದನ್ನು ತಾವು ತಿಳಿದು ಕೊಳ್ಳ ಬೇಕಾದರೆ, ನಾನು ಅಲ್ಲಿಗೆ ಪ್ರವಾಸ ಹೋಗುವಾಗ ಏನು ಪ್ರೊಗ್ರಾಮ್ ಲಿಸ್ಟ್‌ನ್ನು ಇಷ್ಯೂ ಮಾಡ ಲಾಗಿತ್ತೋ ಅದರಲ್ಲಿ ಎಲ್ಲವೂ ವಿಧಿತವಾಗಿದೆ ; ಅದನ್ನು ತಾವು ನೋಡಿಕೊಳ್ಳಬಹುದು ;

ಶ್ರೀ ಎಚ್. ಟಿ. ಕೃಷ್ಣಪ್ಪ.—ಮೈಸೂರು ಜಿಲ್ಲೆಯಲ್ಲಿ ಎಷ್ಟು ಕ್ಷೇತ್ರಗಳಿವೆ ತಿಳಿಸುತ್ತೀರಾ ಸ್ವಾಮಿ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಅದು ರಿಕಾರ್ಡ್‌ನಲ್ಲಿದೆ, ನಾನು ಹೇಳಬೇಕಾದುದು ಅನಾವಶ್ಯಕ

ಶ್ರೀ ಎಚ್.ಟಿ. ಕೃಷ್ಣಪ್ಪ —ನನಗೆ ಗೊತ್ತಿಲ್ಲದೇ ಇರತಕ್ಕ ವಿಚಾರವನ್ನು ನೀವು ಹೇಳಬೇಕಾಗುತ್ತದೆ.

ಶ್ರೀ ಹೆಚ್. ಎಂ. ಚೆನ್ನಬಸಪ್ಪ,—ಮೈಸೂರು ಜಿಲ್ಲೆಯಲ್ಲಿ ಎಷ್ಟು ತಾಲ್ಲೂಕುಗಳಿವೆ ಎನ್ನುವುದು ನಿಮಗೆ ಗೊತ್ತಿಲ್ಲದೇ ಹೋದ ಪಕ್ಷದಲ್ಲಿ ಅದು ರಿಕಾರ್ಡ್‌ನಲ್ಲಿದೆ, ನಾನು ಹೇಳಬೇಕಾದುದಿಲ್ಲ.

ಶ್ರೀ ಹೆಚ್. ಟಿ. ಕೃಷ್ಣಪ್ಪ.— ಮಂತ್ರಿಗಳಾದ ಮೇಲೆ ಯಾವುದಾದರೂ ಭೇಟಿ ಕೊಡದೇ ಇರತಕ್ಕ ಕ್ಷೇತ್ರವಿದೆಯೇ ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಯಾವುದೂ ಇಲ್ಲ.

ಶ್ರೀ ಟಿ. ಎಂ. ಮಂಜುನಾಥ.—ಮಂತ್ರಿಗಳು ಪ್ರವಾಸ ಮಾಡಬೇಕಾದರೆ ಇಂತಿಂಥ ಕೆಲಸಗಳಿಗೆ ಹೋಗಬೇಕು ಎಂದು ಪ್ರೋಗ್ರಾಂ ಹಾಕಿಕೊಂಡು ಅದನ್ನು ತಿಳಿಸುತ್ತಾರೆ. ಆಮೇಲೆ ಪ್ರೋಗ್ರಾಂ ಪ್ರಕಾರ ಆ ರಸ್ತೆಯನ್ನು ಬಿಟ್ಟು ಇನ್ನೊಂದು ರಸ್ತೆಯಲ್ಲಿ ಹೋಗಿ ತಮ್ಮ ಸ್ವಂತ ಕೆಲಸಗಳನ್ನು ಮಾಡಿಕೊಳ್ಳುತ್ತಾರೆ. ಅಂಥಾದ್ದನ್ನು ಕಂಡುಹಿಡಿದು, ಅವರಿಂದ ಸರ್ಕಾರಕ್ಕೆ ಬರತಕ್ಕ ಹಣವನ್ನು ವಸೂಲು ಮಾಡುತ್ತೀರಾ ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಅದಕ್ಕೆ ಸಕಾರಣವಿಲ್ಲ. ಒಂದುವೇಳೆ ಆ ರೀತಿ ಆಗಿದ್ದರೆ ಪ್ರೋಗ್ರಾಮನ್ನು ಬದಲಾವಣೆ ಮಾಡಿಕೊಂಡಿರುತ್ತಾರೆ.

ಶ್ರೀ ಎಚ್. ಟಿ. ಕೃಷ್ಣಪ್ಪ,—ನಾನು ಈ ಆಪಾದನೆ ಮಾಡುತ್ತೇನೆ. ರಾಜಕೀಯ ಪ್ರತಿಪೈಯನ್ನು ಬೆಳೆಸಿಕೊಳ್ಳುವುದಕ್ಕೋಸ್ಕರ ಸರಕಾರದ ಬೊಕ್ಕಸದ ಹಣವನ್ನು ಖರ್ಚುಮಾಡಿದ್ದಾರೆ ಆದುದರಿಂದ ಇದು ಖಾಸಗಿಯಾಗಿ ಖರ್ಚಾಗಿದೆಯೋ ಅಥವಾ ಸಾರ್ವಜನಿಕರಿಗೋಸ್ಕರ ಖರ್ಚಾಗಿದೆಯೋ ಎನ್ನುವುದನ್ನು ತಿಳಿಸುವುದಕ್ಕೋಸ್ಕರ ಇದರ ಬಗ್ಗೆ ವಿಚಾರಣೆ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ವಿಚಾರಣೆ ಅನಾವಶ್ಯಕ. I refute your argument.

Disposal of produce of Karnataka Forests

499 SRI K. R. SRINIVASULU NAYUDU (Shanthinagar) :—Will the Minister for Forests be pleased to state:—

(*a*) the total annual produce from the Karnataka Forests for the last 5 years ;

(*b*) the mode of disposal ; whether by auction or by scheduled rates ;

(*c*) the quantum of sandalwood produced for the last five year;

(*d*) the rates realised in favour of Forest Department ?

SRI C. N. PATIL (Minister for Forests).—(*a*) Particulars under major items are as under :—

1	2	3	4
Year	Timber in Cmtr.	Firewood in Cmtr.	Bamboos tonnes
1970-71	8,65,538	21,38,052	3,27,560
1971-72	7,38,765	20,34,823	2,52,203
1972-73	9,66,850	18,36,172	3,90,020
1973-74	11,29,643	15,80,011	1,64,215
1974-75	11,95,588	16,39,123	2,49,035

	5	6	7
Year	Sandalwood tonnes	Charcoal in tonnes	Rubber in tonnes
1970-71	3,319	40,493	19.50
1971-72	2,596	23,104	26.90
1972-73	2,847	19,770	62.72
1973-74	2,727	28,374	198.80
1974-75	2,334	27,717	365.90